೩. ಪಾಣೆ ಮಂಗಳೂರು ಬಳಿ ನೇತ್ರಾವತಿ ನದಿಗೆ ಸೇತುವೆ ನಿರ್ಮಿಸುವ ಬಗ್ಗೆ

ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ).—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಪಾಣೆ ಮಂಗಳೂರು ಬಳಿ ನೇತ್ರಾವತಿ ಹೊಳೆಗೆ ಈಗ ಇರತಕ್ಕ ಸೇತುವೆಯ ಪಕ್ಕ ಬೇರೆಯೇ ಒಂದು ಸೇತುವೆ ನಿರ್ಮಿಸುವ ಬಗ್ಗೆ ಭೂಮಿಯ ಸರ್ವೆ ಆಗಿ ಗೆಜೆಟ್ ನೋಟಿಫಿಕೇಷನ್ ಕೂಡಾ ಆಗಿರುತ್ತದೆ. ಭೂ ಸ್ವಾಧೀನತೆಯ ಬಗ್ಗೆ ಸಂಬಂಧಪಟ್ಟ ಅನುಭವದಾರರಿಗೆ ಯಾ ಪಟ್ಟಾದಾರರಿಗೆ ನೋಟೀಸು ಹೋಗಿ ಸುಮಾರು ಮೂರು ವರ್ಷಗಳಾದರೂ ಯಾವುದೇ ಆಜ್ಞೆ ಆಗಲಿಲ್ಲ. ಆದ್ದರಿಂದ ಸಂಬಂಧಪಟ್ಟ ಭೂಮಿದಾರರು ತ್ರಿಶಂಕು ಪರಿಸ್ಥಿತಿಯಲ್ಲಿದ್ದಾರೆ. ಭೂಮಿಯಲ್ಲಿ ಧೈರ್ಯವಾಗಿ ಯಾವುದೇ ಕೃಷಿ ಮಾಡುವ ಪರಿಸ್ಥಿತಿ ಇಲ್ಲ. ಇದಕ್ಕೆ ಸಂಬಂಧಪಟ್ಟ ಫೈಲು ಸರಕಾರದ ರೆವಿನ್ಯೂ ಇಲಾಖೆಗೆ ಬಂದಿರುತ್ತದೆ ಎಂದು ತಿಳಿದು ಬಂದಿದೆ. ಈ ಬಗ್ಗೆ ಆದಷ್ಟು ಬೇಗ ಪಂಜೂರು ಮಾಡಿ ಸಂಬಂಧಪಟ್ಟ ಕೆಲಸ ಪ್ರಾರಂಭಿಸಲು ಅನುಕೂಲ ಮಾಡಿಕೊಡಬೇಕಾಗಿ ಸರಕಾರವನ್ನು ಕೋರುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ (ಕಂದಾಯ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಮೇಲ್ಕಂಡ ಸೂಚನೆಗೆ ಈ ಕೆಳಕಂಡ ಹೇಳಿಕೆಯನ್ನು ಕೊಡಲು ಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಪಾಣೆ ಮಂಗಳೂರು ಬಳಿ ನೇತ್ರಾವತಿ ಹೊಳೆಗೆ ಇರತಕ್ಕ ಸೇತುವೆಯ ಪಕ್ಕ ಬೇರೆ ಒಂದು ಸೇತುವೆ ನಿರ್ಮಿಸಲು ಬಿ. ಮೂಡ ಮತ್ತು ಸರಿಕೊಂಬು ಗ್ರಾಮಗಳ ಸರ್ವೆ ನಂ. ೫೭, ೩೭, ೩೮ ಮತ್ತು ಇತರೇ ಸರ್ವೆ ನಂಬರುಗಳಲ್ಲಿ ಒಟ್ಟು ೨೭ ಎಕರೆ ೩೪೪ ಗುಂಟೆ ವಿಸ್ತೀರ್ಣವನ್ನು ಭೂ ಸ್ವಾಧೀನಪಡಿಸಿಕೊಂಡಿರುವುದು ನಿಜವಾಗಿರುತ್ತದೆ. ಅಂತಿಮ ಅಧಿಸೂಚನೆ ದಿನಾಂಕ ೨೨-೧೨-೬೮ ರಂದು ಹೊರಡಿಸಿದ್ದು ಅವಾರ್ಡು ತನಿಖೆ ನಡೆದು ಮೈಸೂರು ವಿಭಾಗಾಧಿಕಾರಿಗಳು ಅವಾರ್ಡು ಒಟ್ಟು ಮೊತ್ತ ರೂ. ೪೪,೬೦, ೪೪೮-೬೦ ಪೈಸೆ ಮೊಬಲಗನ್ನು ಅನುಮತಿಗಾಗಿ ಸರ್ಕಾರಕ್ಕೆ ಮೇ ತಿಂಗಳ ಮಧ್ಯ ಭಾಗದಲ್ಲಿ ಪ್ರಸ್ತಾವನೆಯನ್ನು ಕಳುಹಿಸಿದ್ದಾರೆ. ಪ್ರತಿ ಎಕರೆಗೆ ನಿಗಧಿಪಡಿಸಿರುವ ಬೆಲೆಯ ಬಗ್ಗೆ ಪರಿಶೀಲಿಸಿ ಅವಾರ್ಡನ್ನು ಅನುಮೋದಿಸಲು ಪರಿಶೀಲಿಸಲಾಗುತ್ತಿದೆ. ಅವಾರ್ಡು ಅನುಮೋದಿಸಿದ ತರುವಾಯ ಸಂಬಂಧಪಟ್ಟ ಜಮೀನುದಾರರಿಗೆ ಪರಿಹಾರಧನ ನೀಡುವ ವ್ಯವಸ್ಥೆ ಮಾಡಲಾಗುವುದು.

೧೧.೩೦ ಎ.ಎಂ.

೪. ಬೇರೆ ಕಡೆಯಿಂದ ವರ್ಗವಾಗಿ ಬಂದ ಎಂಜಿನಿಯರ್‌ಗಳನ್ನು ಹಾಸನ ಜಿಲ್ಲಾ ಪರಿಷತ್‌ನವರು ಕೆಲಸಕ್ಕೆ ತೆಗೆದುಕೊಂಡಿಲ್ಲದಿರುವುದು.

ಶ್ರೀ ಬಿ. ಶಿವರಾಮು (ಗಂಡಸಿ).—ಮಾನ್ಯ ಉಪಾಧ್ಯಕ್ಷರೇ, ಹಾಸನ ಜಿಲ್ಲಾ ಪರಿಷತ್‌ಗೆ ಬೇರೆ ಕಡೆಯಿಂದ ವರ್ಗವಾಗಿ ಬಂದಿರುವ ಅಸಿಸ್ಟೆಂಟ್ ಮತ್ತು ಜೂನಿಯರ್ ಎಂಜಿನಿಯರ್‌ಗಳನ್ನು ೧೫ ದಿವಸಗಳಿಂದ ಕೆಲಸಕ್ಕೆ ತೆಗೆದುಕೊಂಡಿಲ್ಲ ಎಂಬ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

ಎರಡನೆಯದಾಗಿ ಲೋಕೋಪಯೋಗಿ ಇಲಾಖೆಯಿಂದ ಜಿಲ್ಲಾ ಪರಿಷತ್‌ನಲ್ಲಿ ಹಾಲಿ ಕೆಲಸ ಮಾಡುತ್ತಿರುವ ಎಂಜಿನಿಯರ್‌ಗಳನ್ನು ಬೇರೆ ಕಡೆಗೆ ವರ್ಗ ಮಾಡಿದ್ದು ಅವರನ್ನು ಜಿಲ್ಲಾ ಪರಿಷತ್ತಿನಿಂದ ರಿಲೀವ್ ಮಾಡದೇ ಅಧ್ಯಕ್ಷರು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿ ವರ್ಗಾವಣೆ ಮಾಡಿರುವ ವಿಚಾರ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಮುಂದಿನ ಕ್ರಮ ಏನು?

ಮೂರನೆಯದಾಗಿ ವರ್ಗಾವಣೆ ಕಾಲದಲ್ಲಿ ಸರಕಾರ ಆದೇಶಿಸಿರುವ ಸ್ಥಳವನ್ನು ಬದಲಾಯಿಸುವ ಅಧಿಕಾರ ಜಿಲ್ಲಾ ಪರಿಷತ್ತಿಗೆ ಇದೆಯೇ, ಒಟ್ಟು ಎಷ್ಟು ಮಂದಿ ಎಂಜಿನಿಯರ್‌ಗಳು ಈ ವರ್ಗಾವಣೆ ತೊಂದರೆಗೆ ಈಡಾಗಿದ್ದಾರೆ. ಇದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಜೆ. ಪಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—ಮಾನ್ಯ ಉಪಾಧ್ಯಕ್ಷರೇ, ಇದಕ್ಕೆ ಉತ್ತರವನ್ನು ಕೊಡಬೇಕಾಗಿರುವವರು ಆರ್.ಡಿ.ಪಿ.ಆರ್. ಸಚಿವರು. ನನ್ನ ಹತ್ತಿರ ಸಂಬಂಧಪಟ್ಟ ಮಾಹಿತಿ ಇಲ್ಲ. ನಾಳೆ ಅವರಿಗೆ ಮಾಹಿತಿ ಕಳುಹಿಸಿಕೊಡುತ್ತೇನೆ.